**ಸಾಕ್ಷಿಗೆ ದಿನಾಂಕಃ12-01-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಪಾಟೀ ಸವಾಲು :: ಪ್ರತಿವಾದಿ ಪರ ಶ್ರೀ.GVK ವಕೀಲರಿಂದ ::**

ಈ ದಾವೆ ಹೂಡಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನನ್ನ ವಾದ ಪತ್ರದಲ್ಲಿ ದಾವಾ ಶೆಡ್ಯೂಲ್ ಸ್ವತ್ತುಗಳು 1976 ರಲ್ಲಿ ಆದ ವಿಭಾಗದಡಿಯಲ್ಲಿ ನನ್ನ ತಂದೆಗೆ ಬಂದಂತಹ ಸ್ವತ್ತಾಗಿರುತ್ತದೆ ಎಂದರೆ ಸರಿ. ನನ್ನ ವಿರುದ್ದ ಪ್ರತಿವಾದಿಗಳು ಒಂದು ಕ್ರಿಮಿನಲ್ ಪ್ರಕರಣ ಹಾಕಿರುತ್ತಾರೆ ಎಂದರೆ ಸದರಿ ಪ್ರಕರಣವು ಮುಕ್ತಾಯವಾಗಿರುತ್ತದೆ ಎಂದು ನುಡಿಯುತ್ತಾರೆ.

ನನ್ನ ತಾಯಿಯವರು ಒಂದು ಮರಣ ಶಾಸನ ಪತ್ರವನ್ನು ಭದ್ರಾವತಿಯ ನನ್ನ ತಂಗಿಯ ಮನೆಯಲ್ಲಿ ಬರೆದಿರುತ್ತಾರೆ ಎಂದರೆ ಸರಿ. ಸದರಿ ವಿಲ್ ನಲ್ಲಿ ನನಗೆ ಬರಬೇಕಾದ ಆಸ್ತಿಯು ಮೊದಲೇ ಬಂದ ಕಾರಣ ನನಗೆ ಯಾವುದೇ ಆಸ್ತಿ ಬರಲು ಬಾಕಿ ಇರುವುದಿಲ್ಲ ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ.

ನನ್ನ ತಂದೆ ತಾಯಿಯ ಆರೋಗ್ಯ ಮತ್ತು ಇತರೇ ವಿಚಾರಗಳನ್ನು ಅವರು ಮೃತರಾಗುವವರೆಗೂ ಪ್ರತಿವಾದಿಗಳೇ ನೋಡಿಕೊಂಡಿರುತ್ತಾರೆ ಎಂದು ವಿಲ್ ನಲ್ಲಿ ನಮೂದು ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ಬದುಕಿದ್ದ ಸಮಯದಲ್ಲಿ ನನ್ನ ಸಹೋದರಿಯವರ ಮದುವೆ ಖರ್ಚುಗಳನ್ನು ಪ್ರತಿವಾದಿಗಳೇ ನೋಡಿಕೊಂಡಿರುವುದಾಗಿ ವಿಲ್ ನಲ್ಲಿ ನಮೂದು ಇರುತ್ತದೆ ಎಂದರೆ ಸರಿಯಲ್ಲ. ಆಗಿನಿಂದ ಇಲ್ಲಿಯವರೆಗೂ ನನ್ನ ಸಹೋದರಿಯರ ಇತರೇ ಹಾರೈಕೆಗಳನ್ನು ಪ್ರತಿವಾದಿಗಳೇ ನೋಡಿಕೊಂಡಿದ್ದು, ನಾನು ನೋಡಿಕೊಂಡಿರುವುದಿಲ್ಲ ಎಂದು ವಿಲ್ ನಲ್ಲಿ ನಮೂದು ಇರುತ್ತದೆ ಎಂದರೆ ಸರಿಯಲ್ಲ.

ದಾವಾ ಶೆಡ್ಯೂಲ್ ಸ್ವತ್ತಿನ್ನು ಅಕ್ರಮವಾಗಿ ಲಪಟಾಯಿಸಲು ಸುಳ್ಳು ಕತೆ ಸೃಷ್ಟಿಸಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಅಣ್ಣ ಸಿದ್ದಪ್ಪನಿಗೂ ಸಹ 1976 ರ ಹಿಂದೆಯೇ ಕುಟುಂಬದ ಆಸ್ತಿಗಳನ್ನು ನೀಡಿದ ಕಾರಣ ದಾವಾ ಶೆಡ್ಯೂಲ್ ಸ್ವತ್ತುಗಳನ್ನು ನೀಡಿದ್ದು, ಅವರೇ ಅದರ ಸ್ವಾಧೀನವನ್ನು 2016 ವರೆಗೂ ಇದ್ದ ಕಾರಣ ಅವರಿಗೆ ಯಾವುದೇ ಹಕ್ಕು ಉಳಿದಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆ ಹೂಡಿದ

ನಂತರ ಸಿದ್ದಪ್ಪನ ಆಸ್ತಿಯನ್ನು ನಾನೇ ಅನುಭವಿಸುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ಸಿದ್ದಪ್ಪ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ನನ್ನ ಹಾಗೂ ಇತರೇ ಕುಟುಂಬದ ಸದಸ್ಯರ ವಿರುದ್ದ ಹಿಸ್ಸಾ ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಸತ್ಯಾಂಶ ತಿಳಿದಿದ್ದರೂ ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: